MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 31-3-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ನಾಲ್ಕು ದಿನಗಳ ಏರಿಕೆಯ ನಂತರ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಹಿಂದಿನ ನಾಲ್ಕು ದಿನಗಳ ತನಕ ಸತತ ಏರಿಕೆ ಕಂಡಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ರಿಂಗಿಟ್ಸ್ ದರ ಪ್ರಾಬಲ್ಯ, ಲಾಭ ಗಳಿಕೆಯಿಂದ ಇಳಿಕೆ ಕಂಡಿದೆ. ದರ 1.72 ಶೇಕಡಾ ಇಳಿಕೆಯಾಗಿ 3723 ರಿಂಗಿಟ್ಸ್ ($ 845.18) ಆಗಿದೆ. ಆದರೆ ಈ ವಾರದಲ್ಲಿ ಒಟ್ಟು 6 ಶೇಕಡಾ ಏರಿಕೆಯೊಂದಿಗೆ ವಾರದ ಗಳಿಕೆಯತ್ತ ಸಾಗಿದೆ. ಮಾರ್ಚನ ಪಾಮೆಣ್ಣೆ ಇಳಿಕೆಯಾಗಲಿದೆಯೆನ್ನಲಾಗಿದೆ.

### ಅಕಾಲಿಕ ಮಳೆಯಿಂದ ಜೋಳ ಬೆಳೆ ಹಾನಿ, ದರ ಹೆಚ್ಚಳ

ಆಂಧ್ರಪ್ರದೇಶದಲ್ಲಿ ಅಕಾಲಿಕ ಮಳೆಯಿಂದ ಕಟಾವಿಗೆ ಸಿದ್ಧವಾಗಿದ್ದ 3 ಲಕ್ಷ ಎಕರೆ ರಾಬಿ ಬೆಳೆಯ ಜೋಳ ನಾಶವಾಗಿದೆಯೆನ್ನಲಾಗಿದೆ. ಇದರಿಂದ ಜೋಳ ದರ ಸ್ಥಳೀಯ ಮಾರುಕಟ್ಟೆಗಳಲ್ಲಿ ಸುಮಾರು 4 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಬಿಹಾರ್‌ನ ಮಾದಾಪುರ್‌ನಲ್ಲೂ ಪ್ರತಿಕೂಲ ಹವಾಮಾನದಿಂದ ಜೋಳ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಉತ್ಪಾದನೆ ಇಳಿಕೆ ದರದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ.

### ಎಪ್ರಿಲ್ 2023 ಕ್ಕೆ 22 ಲಕ್ಷ ಟನ್ ಸಕ್ಕರೆ ದೇಶೀ ಮಾರಾಟ ಕೋಟಾ

ಸರಕಾರ 2023 ಎಪ್ರಿಲ್‌ನ ದೇಶೀ ಮಾರಾಟಕ್ಕೆ 22 ಲಕ್ಷ ಟನ್‌ಗಳ ಕೋಟಾ ನಿಗದಿಗೊಳಸಿದೆಯೆನ್ನಲಾಗಿದೆ. ಮಹಾರಾಷ್ಟ್ರದಲ್ಲಿ ಈ ವರ್ಷ ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ ಉತ್ಪಾದನೆಗಿಂತ ಇಳಿಕೆಯಾಗಬಹುದೆನ್ನಲಾಗಿದೆ. ಕರ್ನಾಟಕದಲ್ಲೂ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಬೇಸಿಗೆ ಸೀಸನ್‌ನಲ್ಲಿ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಗಳಿವೆ.

### ಜಾಂಬಿಯಾ ಹಾಗೂ ಸೆನೆಗಲ್‌ಗೆ 3.5 ಲಕ್ಷ ಟನ್ ಬ್ರೋಕನ್ ರೈಸ್ ರಫ್ತು

ಭಾರತ ಸರಕಾರ ಜಾಂಬಿಯಾ ಹಾಗೂ ಸೆನೆಗಲ್‌ಗಳಿಗೆ ವಿಶೇಷ ಗಣನೆಯೊಂದಿಗೆ 3.5 ಲಕ್ಷ ಟನ್ ಬ್ರೋಕನ್ ರೈಸ್ ರಫ್ತಿಗೆ ಅವಕಾಶ ನೀಡಿದೆಯೆನ್ನಲಾಗಿದೆ.

### ತೊಗರಿ, ಉದ್ದು ಹಾಗೂ ಕಡಲೆಬೇಳೆ ದರ ಹೆಚ್ಚಳ

ಹಿಂದಿನ ತಿಂಗಳೊಳಗೆ ತೊಗರಿ ಹಾಗೂ ಉದ್ದು ದರಗಳು 8 ರಿಂದ 10 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಕಡಲೆಬೇಳೆ ದರವೂ 4 ರಿಂದ 5 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಸರಕಾರ ದರ ಹೆಚ್ಚಳ ಗಮನಿಸಿ ಮಾರುಕಟ್ಟೆಯಲ್ಲಿ ಅವುಗಳ ಲಭ್ಯತೆ ಹೆಚ್ಚಳಗೊಳ್ಳಲು ಕ್ರಮಕೈಗೊಳ್ಳಲಾರಂಭಿಸಿದೆಯೆನ್ನಲಾಗಿದೆ. ವ್ಯಾಪಾರಿಗಳಿಗೆ ಹಾಗೂ ಆಮದುದಾರರಿಗೆ ನಿಯಮಿತವಾಗಿ ತಮ್ಮಲ್ಲಿರುವ ದಾಸ್ತಾನು ಘೋಷಣೆ ಪ್ರಕಟಪಡಿಸಲು ಸರಕಾರ ನಿರ್ದೇಶನ ನೀಡಿದೆಯೆನ್ನಲಾಗಿದೆ. ಹೆಚ್ಚು ದಾಸ್ತಾನು ಹೊಂದದಂತೆ ಸೂಚಿಸಲಾಗಿದೆಯೆನ್ನಲಾಗಿದೆ. ಆಹಾರಧಾನ್ಯಗಳು ಮಾರುಕಟ್ಟೆಗೆ ಸಾಕಷ್ಟು ಲಭ್ಯಗೊಳಿಸಲು ಕ್ರಮಗಳನ್ನು ಕೈಗೊಂಡಿದೆಯೆನ್ನಲಾಗಿದೆ.